1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 09.10.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw- 10 Pw-11

| | | |
|---|---|---|
| ಹೆಸರು | ಃ | ಡಾ.ನರಸಿಂಹಮೂರ್ತಿ |
| ತಂದೆಯ ಹೆಸರು | ಃ | ಮುನಿಯಪ್ಪ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | ಃ | ಪಿಸಿಶಿಯನ್, ಸರ್ಕಾರಿ ಆಸ್ಪತ್ರೆ ಕನಕಪುರ |
| ವಾಸಸ್ಥಳ | ಃ | ಕನಕಪುರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಫೆಬ್ರವರಿ 2020 ರಿಂದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಕನಕಪುರದಲ್ಲಿ ಪಿಸಿಶಿಯನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 12.08.2023 ರಂದು ಬೆಳಿಗ್ಗೆ 11.50 ಗಂಟೆ ಸಮಯದಲ್ಲಿ ರವೀಶ ಎಂ. ಎಂಬ ವ್ಯಕ್ತಿ ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು, ಆತನನ್ನು ಆತನ ಸಹೋದರ ಶಿವಣ್ಣ ಆಸ್ಪತ್ರೆಗೆ ಕರೆತಂದಿದ್ದು ಆತನನ್ನು ಪರೀಕ್ಷಿಸಿದಾಗ ಕೆಳಕಂಡ ಗಾಯ ಕಂಡುಬಂದಿರುತ್ತದೆ. ಗಾಯ ಸಂಖ್ಯೆ 1ಃ ಆತನ ಎಡ ಕಣ್ಣಿನ ಕೆಳಗೆ ರಕ್ತ ಹೆಪ್ಪುಗಟ್ಟಿದ ಗಾಯ ಕಂಡುಬಂದಿತ್ತು.

3. ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪದ್ದಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದು ನಿಶಾನೆ ಪಿ 14 ಇದ್ದು, ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು ನಿಶಾನೆ ಪಿ 14(ಬಿ) ಎಂದು ಗುರುತಿಸಲಾಯಿತು.

4. ಕೈಯಿಂದ ಗುದ್ದಿ ಕಾಲಿನಿಂದ ಒದ್ದು ಹಲ್ಲೆ ಮಾಡಿದರೆ ಸದರಿ ಗಾಯ ಆಗುವ ಸಾಧ್ಯತೆ ಇದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಃ

ಆರೋಪಿ ಪರ ವಕೀಲರನ್ನು ಕೂಗಿಸಲಾಯಿತು. ಆರೋಪಿ ಪರ ವಕೀಲರು ಗೈರು ಹಾಜರಿರುತ್ತಾರೆ. ಆರೋಪಿಯನ್ನು ಕೇಳಲಾಗಿ ಆತ ತನ್ನ ವಕೀಲರು ತನ್ನ ಮೊಬೈಲ್ ಕರೆಯನ್ನು ಸ್ವೀಕರಿಸುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿಯನ್ನು ಯಾರೂ ಪ್ರತಿನಿಧಿಸದೇ ಇರುವ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಂ.ಪಂಚಾಕ್ಷರಿ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.